ಬೇರೆ ದೇಶದವರು ನಮ್ಮ ದೇಶವನ್ನು ಒಡೆಯಲು ಕುತಂತ್ರ ಮಾಡ್ತಿದ್ದಾರಂತೆ. ನಮ್ಮ ದೇಶದವರೆಲ್ಲ ಒಂದಾಗಿ ಅವರನ್ನು ಹಿಮ್ಮೆಟ್ಟಿಸಬೇಕು' ಇತ್ಯಾದಿ ಅಂತೆ ಕಂತೆ ಮಾತುಗಳನ್ನು ಆಡುತ್ತ ಅರ್ಥವೇ ಆಗದ ಉದಾರಣೆಗಳನ್ನು ಕೊಟ್ಟು ಭಾಷಣ ಮಾಡುವ ಜನ ಊರೊಳಕ್ಕೆ ಬರತೊಡಗಿದರು. 'ಬ್ಯಾಂಕುಗಳಿಗೆ ಟೋಪಿ ಹಾಕಿದ ಕೆಲವು ಮನೆಹಾಳರು ರಾಜಕೀಯ ಪಾರ್ಟಿಯೊಂದಕ್ಕೆ ಸಪೋರ್ಟ್ ಮಾಡ್ತಿದ್ದಾರೆ. ದಂಡಿಯಾಗಿ ದುಡ್ಡು ಚೆಲ್ಲಿ ತಮಗೆ ಬೇಕಾದವರನ್ನು ಗೆಲ್ಲಿಸಿಕೊಳ್ತಾರಂತೆ! ಅವರ ಬಲೆಗೆ ಬೀಳಬಾರದು' ಅಂತ ಹೇಳುವವರೂ ಹೊಸಳ್ಳಿಗೆ ಬಂದರು.

'ಇಮಾಂ ಸಾಬರು ಎಲ್ಲಿಂದಲೋ ಬಂದವರು. ಅವರಿಗೆ ನಮ್ಮೂರಲ್ಲಿ ಎರಡೆಕರೆ ಭೂಮಿಯನ್ನು ಸರ್ಕಾರ ಮುಫತ್ತಾಗಿ ಕೊಟ್ಟಿದೆ ಅಂದ್ರೆ ನಂಬೋಕಾಗುತ್ತ? ಅವರು ನಮ್ಮ ದೇಶದವರು ಹೌದೋ, ಅಲ್ಲವೊ? ಅವರೇ ಗೋಮಾಳದ ಜಮೀನು ಕಬ್ಜ ಮಾಡಿಕೊಂಡಿರಬಹುದು. ಊರವರೇ ಮೊದೀನ್ ಸಾಬರನ್ನು ಕರೆಸಿ ವಿಚಾರಿಸಬೇಕು. ಅವರ ಜಮೀನನ್ನು ಊರ ಸುಪರ್ದಿಗೆ ತಗಳ್ಳಬೇಕು' ಅಂತ ಕೆಲವು ಹುಡುಗರು ಪದೇಪದೇ ಹೇಳತೊಡಗಿದರು.

ಅಪ್ಪಂದು ಯಾವೂರು? ಚಿಕ್ಕಪ್ಪನ ಜತೆ ಅವರು ಈ ಹೊಸಳ್ಳಿಗೆ ಬಂದದ್ದು ಯಾವಾಗ? ಈ ಊರಿಗೇ ಯಾಕೆ ಬಂದರು? ಇಲ್ಲೇ ಯಾಕೆ ಉಳಕೊಂಡರು ಅನ್ನೋದು ಮೊದೀನ್‌ಗೆ ಗೊತ್ತಿರಲಿಲ್ಲ. ಅಪ್ಪ, ಚಿಕ್ಕಪ್ಪ ಅನಾಥರೇ? ಅಂತ ಅನೇಕ ಸಲ ಯೋಚಿಸಿದ್ದ.

ಅಪ್ಪ, ಹಳೆಯ ಸೈಕಲೊಂದರ ಮೇಲೆ ಖಾದಿ, ಮಗ್ಗದ ಬಟ್ಟೆ ಥಾನುಗಳನ್ನು ಇಟ್ಟುಕೊಂಡು ಹಳ್ಳಿಗಳಿಗೆ ಹೋಗಿ ಮಾರಾಟ ಮಾಡಿಕೊಂಡು ಬರುತ್ತಿದ್ದರಂತೆ. ಹಳ್ಳಿಗಳಿಗೆ ಹೋಗಿ ಬ್ರಿಟಿಷರ ವಿರುದ್ಧ ಅಪಪ್ರಚಾರ ಮಾಡ್ತೀಯ ಅಂತ ಪೊಲೀಸರು ಒಂದು ಸಲ ಅವರನ್ನು ಅರೆಸ್ಟ್ ಮಾಡಿದ್ದರಂತೆ. ಆಮೇಲೆ ಅಪ್ಪ ಹಳ್ಳಿಗಳಿಗೆ ಹೋಗೋದನ್ನು ನಿಲ್ಲಿಸಿದರಂತೆ. ತಿರುಪಾಲ ಶೆಟ್ಟರ ಮನೆಯ ವಿಶಾಲ ಜಗುಲಿ ಮೇಲೆ ಒಂದು ಕಡೆ ಹೊಲಿಗೆ ಮೆಷಿನ್ ಇಟ್ಟುಕೊಂಡು ಬಟ್ಟೆ ಹೊಲಿಯೋಕೆ ಶುರುಮಾಡಿದರು ಅಂತ ಅಮ್ಮ ಹೇಳಿದ್ದು ಮೊದೀನ್‌ಗೆ ನೆನಪಿದೆ. ಬಟ್ಟೆ ಹೊಲಿಯುತ್ತಿದ್ದದನ್ನು ಅವನು ಸಣ್ಣವನಾಗಿದ್ದಾಗ ನೋಡಿದ್ದ.

ಬ್ರಹ್ಮಚಾರಿಯಾಗಿದ್ದ ಶೆಟ್ಟರು ತಮ್ಮ ಮನೆಯ ಜಗುಲಿಗೆ ಹೊಂದಿಕೊಂಡಿದ್ದ ರೂಮಿನಲ್ಲಿ ದೇವರಮನೆ ಮಾಡಿಕೊಂಡಿದ್ದರು. ಅಲ್ಲಿ ನಿತ್ಯ ಏಳೆಂಟು ಜನರೊಂದಿಗೆ ಕೂತು ಎರಡೂ ಹೊತ್ತು ಭಜನೆ ಮಾಡುತ್ತಿದ್ದರು. ಅವರ ಹಿತ್ತಲಲ್ಲಿ ಇದ್ದ ಹಳೆಯ ಕೊಟ್ಟಿಗೆ ಸುತ್ತ ಗೋಡೆ ಎಬ್ಬಿಸಿ ಸಣ್ಣ ಮನೆಯಂತೆ ಮಾಡಿ ಅದನ್ನು ಅಪ್ಪನಿಗೆ ಬಾಡಿಗೆಗೆ ಕೊಟ್ಟಿದ್ದರಂತೆ. ಹೊಸ ಮನೆ ಕಟ್ಟೋವರೆಗೆ ಅಪ್ಪ, ಚಿಕ್ಕಪ್ಪ, ಅಮ್ಮ ಅದೇ ಸಣ್ಣ ಮನೆಯಲ್ಲಿದ್ದರಂತೆ. ನಾನು ಹುಟ್ಟಿದ್ದು ಅಲ್ಲೇ ಅಂತ ಅಮ್ಮ ಹೇಳಿದ್ದೂ ಮೊದೀನ್‌ಗೆ ನೆನಪಿದೆ.

ಬೆಳಗ್ಗೆ, ಸಂಜೆ ಭಜನೆ ನಡೆಯುವಾಗ ಅಪ್ಪ, ಚಿಕ್ಕಪ್ಪ ಇಬ್ಬರೂ ಹೊಲಿಗೆ ಮೆಷಿನ್ ಪಕ್ಕ ನೆಲದ ಮೇಲೆ ಕಣ್ಣು ಮುಚ್ಚಿ ಕೂರುತ್ತಿದ್ದುದು ಮೊದೀನ್‌ಗೆ ಇನ್ನೂ ನೆನಪಿದೆ. ಬೇಸಿಗೆಯಲ್ಲಿ ಶೆಟ್ಟರ ಜಗುಲಿ ಮೇಲೆ ಚಿಕ್ಕಪ್ಪನ ಜತೆ ಮಲಗುತ್ತಿದ್ದ ಹುಡುಗ ಮೊದೀನ್‌ಗೆ ಬೆಳಗಿನ ಜಾವ ಭಜನೆ ಸಮಯದಲ್ಲಿ ಹಾಡುತ್ತಿದ್ದ ಪದಗಳು ಕಿವಿಯ ಮೇಲೆ ಬೀಳುತ್ತಿದ್ದವು. ಕೇಳಿ ಕೇಳಿ ಕಂಠಪಾಠವೂ ಆಗಿದ್ದವು.

'ಎಲ್ಲಾ ದೇವರುಗಳು, ಧರ್ಮಗಳೂ ಒಂದೇ. ನಾವು ಮಾಡುವ ಕೆಲಸವೇ ಪೂಜೆ ಅಂತ ಅಪ್ಪ ಹೇಳುತ್ತಿದ್ದುದು ಅವನಿಗೆ ನೆನಪಿದೆ. ಅಪ್ಪನ ಬಗ್ಗೆ ಚೆನ್ನಾಗಿ ಗೊತ್ತಿರುವ ಊರ ಹಿರಿಯರು ಅವರ ಬಗ್ಗೆ ಕೆಟ್ಟ ಮಾತು ಆಡುತ್ತಿರುವವರನ್ನು ಕರೆದು ಬುದ್ಧಿ ಹೇಳಬಾರದೇ' ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದ.

'ಇಮಾಂ ಸಾಬರನ್ನು ನಾವು ನೋಡಿದೀವಿ. ಅವರು ನಿಜವಾಗ್ಲೂ ದೊಡ್ಡ ಮನುಷ್ಯ. ಕೆಲವರು